# ಸಿಗ್ನೆಚರ್ ಜೇಡ

■ ಚಿತ್ರ–ಬರಹ: **ಪ್ರಕಾಶ ಎಸ್. ಮನ್ನಂಗಿ**

ಇಲ್ಲೊಂದು ಜೇಡವಿದೆ. ಅದರ ಬಲೆಯಲ್ಲಿ ವೀಕ್ಷಿಸಿದರೆ ಅದು ಅಲ್ಲಲ್ಲಿ ಸಹಿ ಮಾಡಿದಂತೆ ಗೋಚರಿಸುತ್ತದೆ!

ಅರ್ಯಾನಿಡೇ ಕುಟುಂಬಕ್ಕೆ ಸೇರಿದ ಈ ಜೇಡಕ್ಕೆ ವೈಜ್ಞಾನಿಕವಾಗಿ ಆರ್ಗಿಯೋಪ್ ಅನುಸೂಜ ಎಂದು ಕರೆಯುವರು. ಪ್ರೌಢ ಹೆಣ್ಣು ತನ್ನ ತಲೆಯನ್ನು ಸದಾ ಕೆಳಮುಖವಾಗಿಸಿಕೊಂಡು ಬಲೆಯ ಮಧ್ಯದಲ್ಲಿರುತ್ತದೆ. ವೃತ್ತಾಕಾರದ ಬಲೆಯ ಕೇಂದ್ರದಲ್ಲಿ ತೆರವು ಇದೆ. ಏನಾದರೂ ತೊಂದರೆಯಾದರೆ ಅಲ್ಲಿರುವ ತೆರವಿನ ಮೂಲಕ ಬಲೆಯ ಇನ್ನೊಂದು ಬದಿಗೆ ಸರಿಯುತ್ತದೆ. ಇದಕ್ಕೆ ದೊಡ್ಡ ಗಾತ್ರದ ಬಣ್ಣದ ಜಠರವಿದೆ.

ಇದರ ವಿಲಕ್ಷಣವಾದ ಲಕ್ಷಣವೆಂದರೆ, ಬಲೆಯಲ್ಲಿರುವ ಓರೆಕೋರೆಯಾದ ಎಳೆಗಳು. ಥಟ್ಟನೆ ನೋಡಿದರೆ ಇದು ಜೇಡ ಸಹಿ ಮಾಡಿರುವಂತೆ ಗೋಚರಿಸುತ್ತದೆ. ಅದಕ್ಕೆಂದೇ 'ಸಿಗ್ನೇಚರ್ ಜೇಡ' ಎಂದು ಕರೆಯುವರು.

ಸಹಿಯಿಂದ ಈ ಜೇಡಕ್ಕೇನು ಲಾಭ? ಈ ಸಹಿ ಕಪಟ ವೇಷದಂತೆಯೂ ವರ್ತಿಸುತ್ತದೆ. ಇದರಿಂದ ವೈರಿಗಳ ಕಣ್ಣಿಗೆ ಸುಲಭವಾಗಿ ಬೀಳದಂತೆ ತಪ್ಪಿಸಿಕೊಳ್ಳುತ್ತದೆ. ಬಲೆಯತ್ತ ಹಾರಿ ಬರದಂತೆ ಹಕ್ಕಿಗಳಿಗೆ ಎಚ್ಚರಿಕೆಯನ್ನೂ ನೀಡುತ್ತದೆ. ಹೀಗಾಗಿ ಮತ್ತೆ ಮತ್ತೆ ಬಲೆಯನ್ನು ಹೆಣೆಯುವ, ರಿಪೇರಿ ಮಾಡುವ ಜಂಜಾಟದಿಂದ ಪಾರಾಗುತ್ತದೆ. ಅತೀ ನೇರಳೆಯ ಕಿರಣಗಳನ್ನು ಇದು ಪ್ರತಿಫಲಿಸುವುದರಿಂದ, ಕೀಟಗಳನ್ನು ಸೆಳೆದು ಬಲೆಯಲ್ಲಿ ಸಿಲುಕಿಸುತ್ತದೆ. ಹೇಗಿದೆ ಸಹಿಯ ಹುನ್ನಾರ? ●



ಇಲ್ಲಿ ಹಲವು ಸಿಗ್ನೇಚರ್‌ಗಳಿವೆ



ಕೆಳಭಾಗದಲ್ಲಿ ಸಿಗ್ನೇಚರ್ ಗಮನಿಸಿ